ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ
Karnataka State Rural Development and Panchayat Raj University

ರೈತ ಭವನ, ಜನರಲ್‌ಕಾರ್ಯಪ್ಪ ವೃತ್ತ, ಗದಗ– 582 101
RaithaBhavana, General Cariappa Circle, Gadag – 582 101
E-mail: ksrdpruadmissions@gmail.com Phone: 08372-230338, Fax: 08372-297343

News about “Distribution of COVID-19 Medicine Kit “ Published in various Kannada Daily NewsPapers Date:09.06.20201

ವಿಶ್ವವಿದ್ಯಾಲಯದಲ್ಲಿ ಮೆಡಿಕಲ್ ಕಿಟ್‌ಗಳ ವಿತರಣೆಗೆ ಚಾಲನೆ

ಗದಗ, ೮ : ಯೂತ್ ಫಾರ್ ಸೇವಾ, ಹುಬ್ಬಳ್ಳಿ ಹಾಗೂ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಯೂತ್ ರೆಡ್ ಕ್ರಾಸ್ ಕೋಶ ಹಾಗೂ ರಾಷ್ಟ್ರೀಯ ಸೇವಾ ಯೋಜನಾ ಕೋಶ ಇವರ ಸಹಯೋಗದಲ್ಲಿ ಯೂತ್ ಫಾರ್ ಸೇವಾ ಹುಬ್ಬಳ್ಳಿ ಇವರಿಂದ ಕೊಡಲ್ಪಟ್ಟ ಸುಮಾರು ೨೫೦ ಮೆಡಿಕಲ್ ಕಿಟ್‌ಗಳನ್ನು ವಿತರಿಸುವ ಕಾರ್ಯಕ್ರಮಕ್ಕೆ ವಿಶ್ವವಿದ್ಯಾಲಯದ ಕುಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿರ, ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ಹಾಗೂ ಹಣಕಾಸು ಅಧಿಕಾರಿಗಳಾದ ಪ್ರಶಾಂತ ಜೆ.ಸಿ. ಚಾಲನೆ ನೀಡಿದರು.

ಈ ಕಿಟ್ ನಲ್ಲಿ ಒಟ್ಟು ಸುಮಾರು ೫೦೦೦ ರೂಪಾಯಿ ಮೌಲ್ಯದ ಒಂದು ವಾರಕ್ಕೆ ಬೇಕಾಗುವ ಮಾತ್ರೆಗಳು, ಓ.ಆರ್.ಎಸ್. ಆಕ್ಸಿಮೀಟರ್, ಟರ್ಮೋಮೀಟರ್ ಇರುತ್ತವೆ.

ಬಿಪಿಎಲ್ ಕಾರ್ಡ್ ಹೊಂದಿದವರು ೭೦ ರಷ್ಟು ಗ್ರಾಮೀಣ ಪ್ರದೇಶದ ಸೋಂಕಿತರಿಗೆ ಹಾಗೂ ಶೇಕಡಾ ೩೦ ರಷ್ಟು ನಗರ ಪ್ರದೇಶದಲ್ಲಿ ವಾಸವಾಗಿರುವ ಸೋಂಕಿತರಿಗೆ ವಿತರಿಸುವುದಾಗಿ ನಿರ್ಣಯ ಕೈಗೊಂಡಿರುವಂತೆ ಪ್ರತಿದಿನ ಹೋಮ್ ಐಸೋಲೇಶನ್‌ನಲ್ಲಿರುವ ಸೋಂಕಿತರಿಗೆ ವಿಶ್ವವಿದ್ಯಾಲಯದಿಂದ ದೂರವಾಣಿ ಕರೆ ಮೂಲಕ ಅವರ ಕುಟುಂಬದ ಹಿನ್ನೆಲೆಯನ್ನು ತಿಳಿದುಕೊಂಡು ಸೋಂಕಿತರ ಸಂಬಂಧಿಕರು ಬಿಪಿಎಲ್ ಕಾರ್ಡ್ ನೊಂದಿಗೆ ವಿಶ್ವವಿದ್ಯಾಲಯಕ್ಕೆ ಆಗಮಿಸಿ ಪಡೆದುಕೊಳ್ಳುವಂತೆ ತಿಳಿಸಲಾಗುತ್ತಿದೆ.

ಕಿಟ್‌ಗಳನ್ನು ಸ್ವೀಕರಿಸಿದ ಫಲಾನುಭವಿಗಳಿಗೆ ಪ್ರತಿದಿನ ಸಾಯಂಕಾಲ ವಿಶ್ವವಿದ್ಯಾಲಯದ ವೈದ್ಯಾಧಿಕಾರಿಗಳಾದ ಡಾ. ಗೂಳಪ್ಪ ಇವರು ಆನ್ಲೈನ್ ಮೀಟಿಂಗ್ ಮೂಲಕ ಕಿಟ್‌ನಲ್ಲಿರುವ ಔಷಧ ಸೇವನೆ ಹಾಗೂ ಇತರೆ ಉಪಕರಣಗಳ ಉಪಯೋಗದ ಕುರಿತು ಮಾಹಿತಿ ನೀಡುತ್ತಿದ್ದಾರೆ ಹಾಗೂ ಹೆಚ್ಚಿನ ಅನುಮಾನಗಳಿದ್ದಲ್ಲಿ ೯೯೮೦೭೯೧೨೧೨ ಗೆ ಕರೆ ಮಾಡಿ ಮಾಹಿತಿಯನ್ನು ಪಡೆದು ಕೊಳ್ಳಬಹುದು.

ಪಂಚಾಯತರಾಜ್ ವಿಶ್ವವಿದ್ಯಾಲಯದಲ್ಲಿ ಮೆಡಿಕಲ್ ಕಿಟ್‌ಗಳ ವಿತರಣೆಗೆ ಚಾಲನೆ

ಗದಗ, ಜೂ.8. ಯೂತ್ ಫಾರ್ ಸೇವಾ, ಹುಬ್ಬಳ್ಳಿ ಹಾಗೂ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಯೂತ್ ರೆಡ್ ಕ್ರಾಸ್ ಕೋಶ ಹಾಗೂ ರಾಷ್ಟ್ರೀಯ ಸೇವಾ ಯೋಜನಾ ಕೋಶ ಸಹಯೋಗದಲ್ಲಿ ಯೂತ್ ಫಾರ್ ಸೇವಾ ಹುಬ್ಬಳ್ಳಿ ಇವರಿಂದ ಕೊಡಲ್ಪಟ್ಟ 250 ಮೆಡಿಕಲ್ ಕಿಟ್‌ಗಳನ್ನು ವಿತರಿಸುವ ಕಾರ್ಯಕ್ರಮಕ್ಕೆ ಇಂದು ವಿಶ್ವವಿದ್ಯಾಲಯದ ಕುಪತಿ ಪ್ರೊ. ವಿಷ್ಣುಕಾಂತ ಚಟುವಲ್ಲಿ, ಕುಲಸಚಿವ ಪ್ರೊ. ಬಸವರಾಜ ಲಕ್ಕಣ್ಣವರ ಹಾಗೂ ಹಣಕಾಸು ಅಧಿಕಾರಿ ಪ್ರಶಾಂತ ಜೆ.ಸಿ. ಅವರು ಚಾಲನೆ ನೀಡಿದರು.

ಕಿಟ್‌ನಲ್ಲಿ ಒಟ್ಟು ಸುಮಾರು 5000 ರೂ.ಮೌಲ್ಯದ ಒಂದು ವಾರಕ್ಕೆ ಬೇಕಾಗುವ ಮಾತ್ರೆಗಳು, ಓ.ಆರ್.ಎಸ್, ಆಕ್ಸಿಮೀಟರ್, ಟರ್ಮೋ ಮೀಟರ್ ಇವೆ.

'ಹೋಮ್ ಐಸೋಲೇಶನ್‌ನಲ್ಲಿರುವ ಕೋವಿಡ್-19 ಸೋಂಕಿತ ಬಡವರಿಗೆ ಅನುಕೂಲಕಲ್ಪಿಸುವುದಾಗಿರುವುದರಿಂದ ಈ ಉದ್ದೇಶದನ್ವಯ ಕಿಟಗಳನ್ನು ವಿತರಣೆ ಮಾಡುವುದನ್ನು ಖಾತ್ರಿಪಡಿಸಿಕೊಳ್ಳಲು ವಿಶ್ವವಿದ್ಯಾಲಯದ ಕುಲಪತಿಗಳು ಹಾಗೂ ಕುಲಸಚಿವರ ನೇತೃತ್ವದಲ್ಲಿ ಕೋವಿಡ್ ಕಿಟ್ ವಿತರಣೆ ಮಾನದಂಡಗಳನ್ನು ನಿರ್ಧರಿಸುವ ಉದ್ದೇಶದಿಂದ ಒಂದು ಸಮಿತಿಯನ್ನು ರಚಿಸಲಾಗಿತ್ತು.

ಸಮಿತಿಯು ಈ ಕುರಿತಂತೆ ಸಮಗ್ರವಾದ ಸಭೆಯನ್ನು ನಡೆಸಿ ಬಿಪಿಎಲ್ ಕಾರ್ಡ್ ಹೊಂದಿದವರು 70ರಷ್ಟು ಗ್ರಾಮೀಣ ಪ್ರದೇಶದ ಸೋಂಕಿತರಿಗೆ ಹಾಗೂ ಶೇ.30ರಷ್ಟು ನಗರ ಪ್ರದೇಶದಲ್ಲಿ ವಾಸವಾಗಿರುವ ಸೋಂಕಿತರಿಗೆ ವಿತರಿಸುವುದಾಗಿ ನಿರ್ಣಯ ಕೈಗೊಂಡಿರುವಂತೆ ಪ್ರತಿದಿನ ಹೋಮ್ ಐಸೋಲೇಶನ್‌ನಲ್ಲಿರುವ ಸೋಂಕಿತರಿಗೆ ವಿಶ್ವವಿದ್ಯಾಲಯದಿಂದ ದೂರವಾಣಿ ಕರೆ ಮೂಲಕ ಅವರ ಕುಟುಂಬದ ಹಿನ್ನೆಲೆಯನ್ನು ತಿಳಿದುಕೊಂಡು ಸೋಂಕಿತರ ಸಂಬಂಧಿಕರು ಬಿಪಿಎಲ್‌ಕಾರ್ಡ್ ನೊಂದಿಗೆ ವಿಶ್ವವಿದ್ಯಾಲಯಕ್ಕೆ ಆಗಮಿಸಿ ಪಡೆದುಕೊಳ್ಳುವಂತೆ ತಿಳಿಸಲಾಗುತ್ತಿದೆ ಎಂದರು.

ಕಿಟ್‌ಗಳನ್ನು ಸ್ವೀಕರಿಸಿದ ಫಲಾನುಭವಿಗಳಿಗೆ ಪ್ರತಿದಿನ ಸಾಯಂಕಾಲ ವಿಶ್ವವಿದ್ಯಾಲಯದ ವೈದ್ಯಾಧಿಕಾರಿ ಡಾ. ಗೂಳಪ್ಪ ಇವರು ಆನ್‌ಲೈನ್ ಮೀಟಿಂಗ್ ಮೂಲಕ ಕಿಟ್‌ನಲ್ಲಿರುವ ಔಷಧ ಸೇವನೆ ಹಾಗೂ ಇತರೆ ಉಪಕರಣಗಳ ಉಪಯೋಗದ ಕುರಿತು ಮಾಹಿತಿ ನೀಡುತ್ತಿದ್ದಾರೆ.

ಹೆಚ್ಚಿನ ಅನುಮಾನಗಳಿದ್ದಲ್ಲಿ 9980791212ಗೆ ಕರೆ ಮಾಡಿ ಮಾಹಿತಿಯನ್ನು ಪಡೆದುಕೊಳ್ಳಬಹುದು ಎಂದು ತಿಳಿಸಿದ್ದಾರೆ.